**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ04.02.2026**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಪಿ ಎನ್ ವಕೀಲರಿಂದ**

**ಸ ನಂ 136/2 ರಲ್ಲಿ ಈಗ ನನಗೆ 4 ಎಕರೆ 14 ಗುಂಟೆ ಇರುತ್ತದೆ. ಸಾಕ್ಷಿಯು ಸ ನಂ 136/2 ರ ಪಹಣಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ ಪಿ 9 ಎಂದು ಗುರುತಿಸಲಾಯಿತು.** ಸದರಿ ಜಮೀನಿನಲ್ಲಿ ವಾದಿಗೆ ಎರಡು ಮುಕ್ಕಾಲು ಸಲುವಾಗಿ ಕ್ರಯದ ಕರಾರು ಆಗಿತ್ತು ಎಂದರೆ ಸರಿ. ದಾವ ಆಸ್ತಿಯಲ್ಲಿನ ಅಳತೆ ವ್ಯತ್ಯಾಸವನ್ನು ಸರಿ ಮಾಡಿಕೊಂಡುವಂತೆ ನಾನು ಅರ್ಜಿ ಹೂಡಿದೆ ಎಂದರೆ ಸರಿ. **ಸಾಕ್ಷಿಯು ಕಚೇರಿ ಟಿಪ್ಪಣಿ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ನಿ ಪಿ 10 ಎಂದು ಗುರುತಿಸಲಾಯಿತು.** ಈಗ ನಮ್ಮ ಜಮೀನಿನ ಅಳತೆ ಸರಿ ಇರುತ್ತದೆ. ಸಾಕ್ಷಿ ಮುಂದುವರೆದು ವಾದಿಯರ ಅಳತೆ ಸರಿಯಿಲ್ಲ ಎಂದು ಹೇಳಿ ಕ್ರಯ ಪತ್ರ ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ.

ವಾದಿಯರು ನಿಗದಿತ ಸಮಯದಲ್ಲಿ ಕ್ರಯ ಹಣವನ್ನು ಪಾವತಿ ಮಾಡದೇ ಇರುವುದರಿಂದ ನಾನು ಬೇರೆಯವರಿಗೆ ಕ್ರಯ ಮಾಡಿರುತ್ತೇನೆ. 4 ಎಕರೆ 14 ಗುಂಟೆ ಜಮೀನು ಈಗಲೂ ನನ್ನ ಬಳಿಯೇ ಇದ್ದು ಅದನ್ನು ಬೇರೆಯವರಿಗೆ ಮಾರಾಟ ಮಾಡಿಲ್ಲ ಎಂದರೆ ಸರಿ. ವಾದಿಯಿಂದ ಮುಂಗಡ ಹಣ 1 ಲಕ್ಷ ಪಡೆದಿರುತ್ತೇನೆಂದರೆ ಸರಿ. ವಾದಿಯರು ಸರಿಯಾದ ಸಮಯಕ್ಕೆ ಉಳಿದ ಹಣ ನೀಡಿ ಕ್ರಯ ಪತ್ರ ಮಾಡಿಕೊಂಡಿಲ್ಲವೆಂದು ಅವರ ವಿರುದ್ದ ಕಾನೂನು ಕ್ರಮ ತೆಗೆದುಕೊಂಡಿರುವುದಿಲ್ಲ. ಆದರೆ ಮೌಖಿಕವಾಗಿ ಕೇಳಿರುತ್ತೇನೆ. ವಕೀಲರ ಮೂಲಕ ನೋಟೀಸ ನೀಡಿರುವುದಿಲ್ಲ. ಕರಾರು ಪತ್ರದಂತೆ ವಾದಿಯರಿಗೆ ಕ್ರಯ ಪತ್ರ ಮಾಡಿಕೊಡಲು ನಾನು ಬದ್ಧನಾಗಿರುತ್ತೇನೆಂದರೆ ಸರಿಯಲ್ಲ. ಕಾಲಮಿತಿ ಮೀರಿರುತ್ತದೆಂದು ತೋರಿಸಲು ಕರಾರು ಪತ್ರದಲ್ಲಿ ಸಮಯ ನಿಗದಿಯಾಗಿರುತ್ತದೆ. ಕರಾರು ಪತ್ರದಲ್ಲಿ ಸಮಯ ನಿಗದಿ ನಮೂದಾಗಿಲ್ಲ ಎಂದರೆ ಸರಿ.

ಕರಾರು ಪತ್ರದಂತೆ ಕ್ರಯ ಪತ್ರ ಆಗದೇ ಇದ್ದರೆ ಬಡ್ಡಿ ಸಮೇತ ಮುಂಗಡ ಹಣವನ್ನು ವಾಪಸ್ಸು ಕೊಡಲು ಒಪ್ಪಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಿ ಪಿ 1 ಕರಾರು ಪತ್ರದಲ್ಲಿ ಬೇರೆ ಅಕ್ಷರಗಳು ಇರುತ್ತದೆ ಎಂದು ನುಡಿಯುತ್ತಾರೆ. ಅದನ್ನು ನಾನೇ

ಬರೆದಿರುತ್ತೇನೆಂದರೆ ಸರಿಯಲ್ಲ. 08.06.2018 ರ ಕರಾರು ಪತ್ರದಂತೆ ನಾನು ಉಳಿಕೆ ಹಣವನ್ನು ಪಡೆದು ಕ್ರಯಪತ್ರವನ್ನು ಮಾಡಿಕೊಡಲು ಬದ್ಧನಾಗಿರುತ್ತೇನೆಂದರೆ ಸರಿಯಲ್ಲ. ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**